ಸಿ.ಡಬ್ಲೂ-12, ಪಿ.ಡಬ್ಲೂ-3

**ದಿಃ 06.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ.ಪಿ.ಎಸ್.ಹೆಚ್ ವಕೀಲರಿಂದಃ ಆರೋಪಿತರ ಪರವಾಗಿಃ**

ನನ್ನ ಕಣ್ಣಿನ ಶಸ್ತ್ರಚಿಕಿತ್ಸೆಯಾಗಿದ್ದರಿಂದ ನನ್ನ ಕಣ್ಣು ಸ್ಪಷ್ಟವಾಗಿ ಕಾಣುವದಿಲ್ಲ ಅಂದರೆ ಸರಿ. ಹಾವೇರಿಯ ಕುಳೇನೂರ ಕ್ರಾಸ ಹತ್ತಿರ ಹಾವೇರಿ ಕಡೆಗೆ ಮೂರು ಕಿ.ಮೀ ಮತ್ತು ಸಂಗೂರ ಕಡೆಗೆ ಒಂದು ಕಿ.ಮೀ ಟ್ರ್ಯಾಕ್ಟರ ನಿಲ್ಲುತ್ತವೆ ಅಂದರೆ ಸರಿ. ಆ ಸಮಯದಲ್ಲಿ ಸಕ್ಕರೆ ಪ್ಯಾಕ್ಟರಿಗಳು ಸಕ್ಕರೆಯನ್ನು ತಯಾರಿಸಲು ಪ್ರಾರಂಭ ಮಾಡುತ್ತವೆ. ಆದ್ದರಿಂದ ಲಾರಿಗಳ ಮತ್ತು ಟ್ರಕ್ಕುಗಳ ಸಂದಣಿ ಹೆಚ್ಚಾಗಿರುತ್ತದೆ ಅಂದರೆ ಸರಿ. ಸದರಿ ಸ್ಥಳದಲ್ಲಿ ಎರಡು ಕಿ.ಮೀ ಯಾವುದೇ ವಾಹನಗಳು ಅತೀ ವೇಗವಾಗಿ ಹೋಗಲು ಸಾಧ್ಯವಾಗುವದಿಲ್ಲ ಅಂದರೆ ಸರಿಯಲ್ಲ. ಅಪಘಾತವಾದಾಗ ಅಪಘಾತವಾದ ಸ್ಥಳದಲ್ಲಿ ಇರಲಿಲ್ಲ, ಆದರೆ ನಾನು ದೂರದಲ್ಲಿ ಇದ್ದೇನು. ಅಪಘಾತವು ಯಾರ ತಪ್ಪು ಚಾಲನೆಯಿಂದ ಮತ್ತು ಹೇಗೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಪೋಟೋಗಳನ್ನು ಯಾವ ಕಾರಣಕ್ಕಾಗಿ ಮತ್ತು ಎಲ್ಲಿ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳಾಗಿ ಇರುತ್ತವೆ ಅಂದರೆ ಸರಿಯಲ್ಲ. ಆರೋಪಿಗಳನ್ನು ಇದೇ ದಿವಸ ನ್ಯಾಯಾಲಯದಲ್ಲಿ ನೋಡುತ್ತಿದೆದೇನೆ ಅಂದರೆ ಸರಿ. ಅದೇ ರೀತಿ ಆರೋಪಿಗಳನ್ನು ಮೊದಲು ಎಲ್ಲಿಯೂ ಸಹ ನೋಡಿಲ್ಲ ಅಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಎಲ್ಲ ಸಂಗತಿಗಳು ಸುಳ್ಳಾಗಿರುತ್ತವೆ ಅಂದರೆ ಸರಿ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.

ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು

ಹಾವೇರಿ.